**Misc .No. 6/2023**
**ಪಿಡಬ್ಲ್ಯೂ:1**

**ದಿಃ 15-10-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ ವೈ.ಎಂ ಆರ್ ಎದುರುದಾರರ 1,4 ಮತ್ತು 5 ಪರ ವಕೀಲರಿಂದ**

ನಾನು 9ನೇ ತರಗತಿ ವ್ಯಾಸಂಗ ಮಾಡಿದ್ದೇನೆ. ಕನ್ನಡ ಮತ್ತು ಇಂಗ್ಲೀಷ್ ಓದಲು ಬರೆಯಲು ಬರುತ್ತದೆ. ಕಳೆದ ಐದು ವರ್ಷಗಳಿಂದ ನಾನು ಮೊಬೈಲ್ ಉಪಯೋಗಿಸುತ್ತಿದ್ದೇನೆ. ನನ್ನ ಮೊಬೈಲ್ ಮೂಲಕ ನಾನು ದಾಖಲಿಸಿದ್ದ ಪ್ರಕರಣದ ಕುರಿತು ನನ್ನ ವಕೀಲರನ್ನು ಸಂಪರ್ಕಿಸಿ ತಿಳಿದುಕೊಳ್ಳಲು ತೊಂದರೆ ಇಲ್ಲ ಎಂದರೆ ಸರಿ. ನಾನು ಈ ಮುಂಚೆ ಓ ಎಸ್ 56/2019 ಅಂತ ಪ್ರಕರಣ ದಾಖಲಿಸಿದ್ದೆ ಎಂದರೆ ಸರಿ. ಅಸಲು ದಾವಾ ನಂ 56/2019 ರ ಪ್ರಕರಣದಲ್ಲಿ ನಾನು ಒಂದು ಬಾರಿಯೂ ನ್ಯಾಯಾಲಯಕ್ಕೆ ಹಾಜರು ಆಗಿಲ್ಲ. ಓ ಎಸ್ ನಂ 56/2019 ರ ಪ್ರಕರಣವನ್ನು ಯಾವ ದಿನಾಂಕದಂದು ದಾಖಲಿಸಿದ್ದೆ ಎಂದು ನೆನಪಿಲ್ಲ. ಸದರಿ ಪ್ರಕರಣದಲ್ಲಿ ಪ್ರತಿವಾದಿಗಳು ಸಲ್ಲಿಸಿದ್ದ ಪ್ರತಿವಾದ ಪತ್ರದ ಬಗ್ಗೆ ತಿಳಿದುಕೊಂಡಿಲ್ಲ. ಮಹದೇವಪ್ಪ ಮತ್ತು ರತ್ನಮ್ಮ ನನ್ನ ತಂದೆ ತಾಯಿ. ಪ್ರತಿವಾದಿಗಳು ಭದ್ರಾವತಿ ನ್ಯಾಯಾಲಯದಲ್ಲಿ ದಾಖಲಿಸಿದ್ದ ಎಂ ಸಿ 21/1989 ರ ಪ್ರಕರಣದ ವಿಷಯ ಉಲ್ಲೇಖಿಸಿ ಪ್ರತಿವಾದ ಪತ್ರವನ್ನು ಅಸಲು ದಾವೆಯಲ್ಲಿ ದಾಖಲಿಸಿದ್ದ ಕಾರಣ ನಾನು ಓ ಎಸ್ ನಂ 56/2019 ರ ಪ್ರಕರಣದಲ್ಲಿ ಹಾಜರಾಗಿರಲಿಲ್ಲ ಎಂದರೆ ಸರಿಯಲ್ಲ. ಓ ಎಸ್ ನಂ 56/2019 ರ ಪ್ರಕರಣದಲ್ಲಿ ಒಟ್ಟು ಎಷ್ಟು ಬಾರಿ ನ್ಯಾಯಾಲಯದಲ್ಲಿ ಮುದ್ದತು ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲ. ಓ ಎಸ್ ನಂ 56/2019 ರ ಪ್ರಕರಣದಲ್ಲಿ ಕೊನೆಯದಾಗಿ ನಾನು ಒಂದು ವರ್ಷದ ಹಿಂದೆ ನಮ್ಮ ವಕೀಲರನ್ನು ಭೇಟಿಯಾಗಿದ್ದೆ. ಆಗ ನಮ್ಮ ವಕೀಲರು ಪ್ರಕರಣ ವಜಾ ಆಗಿದೆ ಎಂದು ತಿಳಿಸಿದ್ದರು. ಓ ಎಸ್ ನಂ 56/2019 ರ ಪ್ರಕರಣ ವಜಾ ಆಗಿ ಸುಮಾರು 5-6 ತಿಂಗಳು ಆದ ನಂತರ ನಾನು ನಮ್ಮ ವಕೀಲರನ್ನು ಭೇಟಿಯಾಗಿದ್ದೆ. ಓ ಎಸ್ ನಂ 56/2019 ರ ಪ್ರಕರಣದಲ್ಲಿ ನನ್ನ ಪರವಾಗಿ ಇದ್ದ ವಕೀಲರು ಪ್ರಕರಣದ ಕಡತವನ್ನು ನೀಡಲು 3 ತಿಂಗಳು ಮಾಡಿದ್ದರು. ನಮ್ಮ ವಕೀಲರ ಬಳಿ ಇದ್ದ ಪ್ರಕರಣದ ಕಡತ ಪ್ರಕರಣ ದಾಖಲಿಸಲು ಅವಶ್ಯಕತೆ ಇದ್ದಿರಲಿಲ್ಲ ಎಂದರೆ ಸರಿಯಲ್ಲ. ಪ್ರಕರಣ ದಾಖಲಿಸಲು ಏಕೆ ತಡ ಆಯಿತು ಎಂಬ ಬಗ್ಗೆ ನಾನು ಅರ್ಜಿಯಲ್ಲಿ ತಿಳಿಸಿದ್ದೇನೆ. ಎದುರುದಾರರು ಸಲ್ಲಿಸಿದ್ದ ತಕರಾರಿನ ಬಗ್ಗೆ ತಿಳಿದುಕೊಂಡಿದ್ದೇನೆ. ಎಂ ಸಿ ನಂ 21/1989 ರ ಪ್ರಕರಣದಲ್ಲಿ ನನ್ನ ತಂದೆ ತಾಯಿ ಹಕ್ಕಿನ ಬಗ್ಗೆ ನ್ಯಾಯಾಲಯ ತೀರ್ಮಾನಿಸಿದ್ದ ಕಾರಣ ಓ ಎಸ್ ನಂ 56/2019 ದಾಖಲಿಸಲು ನಮಗೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಸದರಿ ವಿಷಯವನ್ನು ಈ ಪ್ರಕರಣ ಮತ್ತು ಓ ಎಸ್ ನಂ 56/2019 ರ ಪ್ರಕರಣದಲ್ಲಿ ಮರೆ ಮಾಚಿ

ಎದುರುದಾರರಿಗೆ ತೊಂದರೆ ನೀಡುವ ಉದ್ದೇಶದಿಂದ ಪ್ರಸ್ತುತ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಪ್ರತಿವಾದಿಗಳು ಯಾರು ಅವರ ಪರ ವಕೀಲರು ಯಾರು ಎಂದು ನನಗೆ ಗೊತ್ತಿಲ್ಲ. ಈ ಪ್ರಕರಣಕ್ಕಾಗಿ ಆ ಬಗ್ಗೆ ನನ್ನ ಅರ್ಜಿಯಲ್ಲಿ ಬರೆಯಿಸಿದ್ದೇನೆ ಎಂದರೆ ಸರಿ. ಸುಳ್ಳು ಮಾಹಿತಿ ನೀಡಿ ಸುಳ್ಳು ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಅರ್ಜಿ ಪುರಸ್ಕರಿಸಲು ಯಾವುದೇ ಸಕಾರಣ ನೀಡಿಲ್ಲ ಎಂದರೆ ಸರಿಯಲ್ಲ. ನಿಜ ಸಂಗತಿಗಳನ್ನು ಮರೆ ಮಾಚಿ ಬೇರೆ ವಕೀಲರ ಮೂಲಕ ಸುಳ್ಳು ಪ್ರಕರಣ ದಾಖಲಿಸಿ ಪೂರಕವಾಗಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಇಂಗ್ಲೀಷ್ ಓದಲು ಬರೆಯಲು ಬರುವುದಿಲ್ಲ. ನನ್ನ ಮುಖ್ಯ ವಿಚಾರಣಾ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತಿಲ್ಲ.

ಪಾಟೀ ಸವಾಲುಃ ಶ್ರೀ ಎಂ ಎಸ್ ಪಿ 2ನೇ ಎದುರುದಾರ ಪರ ವಕೀಲರ ಪಾಟೀ ಸವಾಲಿಗೆ ಸಮಾಯಾವಕಾಶ ಕೋರಿದು ಸಕಾರಣ ಇರದೇ ಇದ್ದ ಕಾರಣ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ ಎಂ ಎಫ್ ಸಿ., ಚನ್ನಗಿರಿ.